ದಿನಾಂಕ 09-03-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಹೆಚ್ಚುವರಿ ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಎಸ್.ಜಿ.ವಿ ವಕೀಲರಿಂದಃ**

1. ನಿ.ಪಿ-15 ರಿಂದ 27 ರ ದಾಖಲೆಗಳು ನಿಧಾನವಾಗಿ ಸಿಕ್ಕಿರುವ ಕಾರಣಕ್ಕೆ ಈಗ ಹಾಜರುಪಡಿಸಿರುತ್ತೇನೆ. ನಿ.ಪಿ-16 ರ ಪಹಣಿ ಪತ್ರಿಕೆಯಲ್ಲಿ ಕಂಡು ಬರುವ ಜಮೀನು ಶ್ರೀ ಪ್ರಭುದೇವ ರೈಸ್ ಮಿಲ್ ಪಾಲುದಾರರ ಸಂಸ್ಥೆ ಪರವಾಗಿ ಅದರ ಮ್ಯಾನೇಜಿಂಗ್ ಪಾರ್ಟನರ್ ಆದ ಮಹಾಲಿಂಗಪ್ಪ ತಂದೆ ಚಂದ್ರಶೇಖರ ಶೆಟ್ಟರ ರವರ ಹೆಸರಿನಲ್ಲಿದೆ ಎಂದರೆ ಸರಿ. ಸ ನಂಃ 3/ಅ ಜಮೀನಿನ ಕ್ಷೇತ್ರವಾದ 1 ಎಕರೆ 33 ಗುಂಟೆ 3.25 ಆಣೆ ಜಮೀನು ನನ್ನ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಅಧಿಕಾರಿಗಳು ನೀಡಿರುವ ಚಕ್ಕುಬಂದಿ ಪ್ರಮಾಣ ಪತ್ರ, ಕೆ.ಡಿ.ಟಿ ದಾಖಲೆ ಮತ್ತು ಉತಾರದ ಆಧಾರದ ಮೇಲೆ ಸದರಿ ಜಮೀನು ನನ್ನ ಸ್ವಾಧಿನದಲ್ಲಿ ಇದೆ ಎಂದು ಹೇಳುತ್ತಿದ್ದೇನೆ.

2. ನಿ.ಪಿ-18 ರ ಋಣಭಾರ ರಾಹಿತ್ಯ ಪ್ರಮಾಣ ಪತ್ರವು 2009 ರವರೆಗೆ ಸಂಬಂಧಿಸಿದ ದಾಖಲೆ ಆಗಿರುತ್ತದೆ ಎಂದರೆ ಸರಿ. 2009 ರಿಂದ ಮುಂದುವರೆದಂತೆ ಇಂದಿನವರೆಗೆ ಸ ನಂಃ 31/ಅ ಜಮೀನಿಗೆ ಸಂಬಂಧಿಸಿದ ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಪ್ರಸ್ತುತ ಇಸವಿವರೆಗೆ ನಾನು ಉದ್ದೇಶಪೂರ್ವಕವಾಗಿ ಸದರಿ ಜಮೀನಿಗೆ ಸಂಬಂಧಿಸಿದ ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಪ್ರತಿವಾದಿಯು ಸಾರ್ವಜನಿಕ ಹರಾಜಿನಲ್ಲಿ ಹಾವೇರಿ ಹಣಕಾಸು ಸಂಸ್ಥೆಯಿಂದ ದಾವಾ ಜಮೀನಿನ ಒಟ್ಟು ವಿಸ್ತೀರ್ಣದ ಪೈಕಿ 2 ಎಕರೆ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಖರೀದಿಸಿದ ಜಮೀನಿನಲ್ಲಿ ಪ್ರತಿವಾದಿಯು ವಸತಿ ಉದ್ದೇಶಕ್ಕೆ

ಅನ್ಯಕ್ರಾಂತ ಮಾಡಿಸಿ ಅಲ್ಲಿ ಹಲವಾರು ಬಿನ್ ಶೇತ್ಕಿ ಪ್ಲಾಟುಗಳನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ 2 ಎಕರೆ ಜಮೀನಿನಲ್ಲಿ ಮಾಡಿಸಿಕೊಂಡ ಬಿನ್ ಶೇತ್ಕಿ ಪ್ಲಾಟುಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿಯಲ್ಲಿ ದಾಖಲೆಗಳು ಪ್ರತಿವಾದಿ ಹೆಸರಿಗೆ ಆಗಿರುತ್ತವೆ ಎಂದರೆ ಸರಿಯಲ್ಲ. ಬಿನ್ ಶೇತ್ಕಿ ಪ್ಲಾಟುಗಳಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಯ ದಾಖಲೆಗಳನ್ನು ನಾನು ನೋಡಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ದಾವಾ ಆಸ್ತಿಯನ್ನು ವಹಿವಾಟು ಮಾಡಲು ಪ್ರತಿವಾದಿಯು ನನಗೆ ತೊಂದರೆ ನೀಡಿದ ಕಾರಣಕ್ಕೆ ಈ ದಾವೆಯನ್ನು ಸಲ್ಲಿಸಿದ್ದೇನೆ. ದಾವಾ ಆಸ್ತಿಯಾದ 1 ಎಕರೆ 33 ಗುಂಟೆ ಜಮೀನು ಮಹಾಲಿಂಗಪ್ಪ  ತಂದೆ ಚಂದ್ರಶೇಖರ ಶೆಟ್ಟರ ರವರ ಮಾಲ್ಕಿ ಸ್ವಾದೀನವುಳ್ಳ ಜಮೀನು ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಮೋಸದಿಂದ ಕಬಳಿಸುವ ಉದ್ದೇಶಕ್ಕೆ ಪ್ರತಿವಾದಿಯು ವಹಿವಾಟಿಗೆ ತೊಂದರೆ ನೀಡಿರುತ್ತಾರೆ ಎಂದು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ  ಎಂದು
ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ